ಹಳ್ಳಗಳ ದಂಡೆಗೆ ಹಾರುತ್ತಿದ್ದ. ಮೀನಿನ್‌ದೂಮ್ಯ ಅಂತಲೇ ಹೆಸರಾಗಿದ್ದ. ಕೂಣಿ ಹಾಕುವುದು, ಹೊಂಡ ತೋಣಕುವುದು, ಪಂಜಿಯನ್ನೇ ಬಲೆಯಂತೆ ಉಪಯೋಗಿಸುವುದು... ಮಾಡದ ಕೆಲಸವಿಲ್ಲ. ಆ ವರ್ಷ ಒಂದೇ ಸಮ ಮಳೆ. ರೋಹಿಣಿ ಮಳೆಗೇ ಕೆರೆಯೆಲ್ಲ ಕೋಡಿ ಬಿದ್ದಿದ್ದವು. ಮೋಡಕವಿದ ಕಾಡಿಗೆ ಕತ್ತಲು; ಮಳೆ ಜಿಟಿಜಿಟಿ ಸುರಿಯುತ್ತಿತ್ತು. ಲಾಟೀನು ಹಿಡಿದು ವಂಟ್ಲಾಲುಕೆರೆಗೆ ಹೋಗಿದ್ದ. ಕಾಲುವೆಯ ತುಂಬಾ ಬುಳುಗುಟ್ಟುವ ಹತ್ತುಮೀನುಗಳು! ಕತ್ತಿಯಿಂದ ಕಡಿಯುವುದು; ಚೀಲಕ್ಕೆ ತುಂಬುವುದು ಮಾಡುತ್ತ ಮೈಮರೆತಿದ್ದ. ಚೀಲ ಮುಕ್ಕಾಲು ತುಂಬಿದರು ಇನ್ನೂ ಮೀನುಗಳು ಹತ್ತುತ್ತಲೇ ಇವೆ. ಬಗ್ಗಿ ಮೀನು ಕಡಿಯುತ್ತಿದ್ದವನ ಹಿಂದೆ ಸದ್ದಾಯಿತಂತೆ. ತಿರುಗಿದರೆ ಎತ್ತರದ ಮುದುಕನೊಬ್ಬ ನಿತ್ತಿದ್ದ. ಅವನ ಕೈಯಲ್ಲಿ ನಿಗಿನಿಗಿ ಬೆಂಕಿಯುಗುಳುವ ದೊಂದಿ. ದೊಂದಿಯ ಬೆಳಕನ್ನು ದೂಮ್ಯನತ್ತ ತೂರುತ್ತ 'ಹಿಡಿದಿದ್ದು ಸಾಕಿನ್ನು... ದುರಾಸೆ ವಳ್ಳೇದಲ್ಲ. ಮಧ್ಯರಾತ್ರಿ ಮೀರತು; ನಡಿ ಮನಿಗೆ...' ಆದೇಶಿಸಿದನಂತೆ. ಅವನ ಸ್ವರ ಹೇಗಿತ್ತೆಂದರೆ ದೂಮ್ಯನಿಗೆ ಮಾತಾಡಲು ತೋಚಲೇ ಇಲ್ಲವಂತೆ. ಮನೆಯತ್ತ ಎರಡು ಹೆಜ್ಜೆ ಹಾಕಿ ತಿರುಗಿ ನೋಡಿದರೆ ಯಾರೂ ಇರಲೇ ಇಲ್ಲವಂತೆ!... 'ಅದು ಮತ್ಯಾರೂ ಅಲ್ ಮಗಾ... ವಂಟ್ಲಾಲು ಭೂತವೆ! ಅಲ್ಲೆಲ್ಲ ಪಹರೆ ಕೊಡತಾ ಇರತೈತಿ. ನಂಗ್ ಗ್ಯಾನಕ್ಕೇ ಬರಲಿಲ್ ನೋಡು!' ಅಂದಿದ್ದ ಭಯಭಕ್ತಿಯನ್ನು ಕಣ್ಣಲ್ಲಿ ತುಂಬಿಕೊಂಡು. ಇದೆಲ್ಲ ನೆನಪಾದಾಗ ದೊಡ್ಡೀರ್ಯನ ಮನಸು ಮತ್ತೆ ವಿಚಲಿತವಾಗುತ್ತಿತ್ತು.

> **ದೊಡ್‌ಎದೆ ಸುಗಣಿ ಅಂತಲೆ ಕರೆಸಿಕೊಳ್ಳೋಳ ಎದೆಗೆ ಒಂದು ಮಗೂನ ಕೊಡಲಿಕ್ಕಾಗಲಿಲ್ಲ ತನಗೆ ಅನ್ನುವ ಸಂಕಟ ಅಷ್ಟಿಷ್ಟು ಅವಮಾನವಾಗಿಯು ಅಷ್ಟಿಷ್ಟು ವಿಷಾದವಾಗಿಯು ಸುಡುತ್ತಿತ್ತು.**

ದೊಡ್‌ಎದೆ ಸುಗಣಿ, ಇಬೂತಿ ಸುಗಣಿ, ಬಂಗಾರಿಯರ ತಂಡ ಕುಡುಗೋಲು ಹಿಡಿದು ನಸುಕಿನಲ್ಲೆ ಕ್ಯಾದ್ಗೆ ಕೆರೆ ದಾರಿ ಹಿಡಿದಿದ್ದರು. ದೀವರಕೇರಿ ಸಣ್ಣಪ್ಪನ ಗದ್ದೆ ಕೊಯ್ಯುವ ಕೆಲಸವಿತ್ತು. ಕೆರೆ ಕೆಳಭಾಗದಲ್ಲಿದ್ದ ಸರುವಿನಲ್ಲಿದ್ದ ಗದ್ದೆ. ಐದೆಕರೆ ಹಣ್ಣಾಗಿ ಉದುರತೊಡಗಿದ್ದಕ್ಕೆ ಎಷ್ಟು ಆಳುಗಳು ಸಿಕ್ಕರೂ ಬೇಕಿತ್ತು. 'ವಂದೀಟು ರೊಕ್ಕ ಒಟ್ಟಾತಂದ್ರ ಜಾತ್ರ್ಯಾಗ ಯಾಡ್ ಕುರಿಮರಿ ತಗಾಬೇಕಂತ ಮಾಡೀನಿ. ಮಗನ್ ಮದವಿ ಬಂತು. ಆಮ್ಯಾಲ ಮಕ್ಕಳುಮರೀಗಿ ಹಾಲು ಬೇಕಂದ್ರ ಎಲ್ಲಿ ಹ್ವಾಗಲಿ?' ಬಂಗಾರಿ ಅಂದಳು. 'ನನ್ ಯರಡ್ನೇ ಸ್ವಸಿ ಮತ್ ಕಾಲು ವಜ್ಯಾಗ್ಯಾವು. ನಾಕನೇದಕ್ಕಿನ್ನ ಒಂದೂವರಿ ಆಗಿಲ್ಲ... ಬರೀ ಬಾಣಂತನ ಮಾಡದ ಆತವ್ವ ನಂಗಂತು!' ಇಬೂತಿ ಸುಗಣಿ ಬೇಜಾರಿಂದ ಹೇಳಿದಳು. 'ಈ ಸುಗಣಕ್ಕಂದೇ ಪಾಡು ಬಿಡವ್ವ... ಸ್ವಂತಗದ್ದಿ, ಮ್ಯಾಲಿಂದ್ ದೊಡ್ಡೀರಣ್ಣನ ಸಂಪಾದ್ನಿ; ಉಂಡ್ಕಂಡಿದ್ರಾತು... ಕೆಲಸ ಯಾಕ?' ಬಂಗಾರಿ ತನ್ನ ಪರಿಪಾಟಲನ್ನು ಲಕ್ಷ್ಯದಲ್ಲಿಟ್ಟು ಹೇಳಿದ್ದು ದೊಡ್‌ಎದೆ ಸುಗಣಿಗೆ ಹಿತವಾಗಿರಲಿಲ್ಲ. 'ಗಂಡಹೆಂತಿ ಉಂಡ್ಕಂಡಿರಾದೆ ಸುಕ ಅಲ್ಲನೆ ಬಂಗಾರಿ? ನಾ ನಿಮ್ಜೋಡಿ ಬರಾದ್ ನಿಂಗ್ ಬ್ಯಾಡಾಗೈತಿ?' ಸಿಟ್ಟಿನ ದನಿಯಲ್ಲಿ ಕೇಳಿದಳು. ಪರಿಸ್ಥಿತಿಯ ಅರಿವು ಉಳಿದಿಬ್ಬರಿಗೂ ಆಗಿ ಯಾಕೆ ತಾನು ಬಾಯಿತಪ್ಪಿ ಹಾಗಂದೆ ಅಂತ ಬಂಗಾರಿ ಪರಿತಪಿಸಿದಳು. ಎದುರು ಧೈರ್ಯವಿಲ್ಲದಿದ್ದರೂ ಜನ ಹಿಂದೆಬಿಟ್ಟು ತನ್ನ ಮಾತಾಡಿಕೊಳ್ಳುವುದು ಅವಳಿಗೆ ಗೊತ್ತಿತ್ತು. ತನ್ನ ಗಂಡ ಬೇರೆಯವರಿಗೆ ಪರಿಹಾರ ಹೇಳುತ್ತಾನೆ; ಸ್ವಂತದ ಸಮಸ್ಯೆಗೆ ಅವನ ಹತ್ತಿರ ಪರಿಹಾರ ಯಾಕಿಲ್ಲ ಅನ್ನುವ ಸಿಟ್ಟು ಬರುತ್ತಿತ್ತವಳಿಗೆ. ಆವತ್ತು ಗಂಡನಿಗೆ ಗದ್ದೆಯಲ್ಲಿ ಅಷ್ಟಾದ